ಅ) ಬೇಡಿಕೆ ಹೆಚ್ಚಿಗೆ ಬಂದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೆಚ್ಚುವರಿ ಭೂಮಿಯನ್ನು ಅಭಿವೃದ್ಧಿಪಡಿಸುವುದು.

ಇ) 434 ಸಣ್ಣ ಪ್ರಮಾಣದ ಕೈಗಾರಿಕೆಗಳು, 2 ಮಧ್ಯಮ ಪ್ರಮಾಣದ ಕೈಗಾರಿಕೆಗಳು ಸ್ಥಾಪಿತವಾಗಿ ಕಾರ್ಯಾರಂಭ ಮಾಡಿವೆ.

ಈ) ಈವರೆಗೆ 14 ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲಾಗಿದೆ.

ಉ) ಸಣ್ಣ ಮತ್ತು ಮಧ್ಯಮ ರೋಗಗ್ರಸ್ತ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಈ ಕೆಳಗಿನ ಸವಲತ್ತುಗಳನ್ನು ನೀಡಲಾಗುವುದು:-

1) ದಿನಾಂಕ 26-12-1996ರ ಸರ್ಕಾರಿ ಆದೇಶ ಸಂಖ್ಯೆ:ಸಿಐ.112 : ಪಿಯುಎಂ. 93ರಲ್ಲಿ ಇದ್ದಂತಹ ಮಾರ್ಜಿನ್ ಮನಿ ಯೋಜನೆಯನ್ನು ಮುಂದುವರೆಸಲಾಗಿದೆ.

2) ಕಾರ್ಖಾನೆಗಳು ಮುಚ್ಚಲಾದ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್.ನವರು ಫಿಕ್ಸೆಡ್ ಮತ್ತು ಡಿಮ್ಯಾಂಡ್ ಚಾರ್ಜುಗಳನ್ನು ಮಾಡುವುದಿಲ್ಲ.

3) ಕೆ.ಪಿ.ಟಿ.ಸಿ.ಎಲ್.ಗೆ ಕಾರ್ಖಾನೆಗಳಿಂದ ಬಾಕಿ ಇದ್ದ ಹಣವು ಮರುಪಾವತಿ ಮಾಡಲು ಆರು ವರ್ಷ ಅವಧಿಯಲ್ಲಿ ಅಂದರೆ, ಪ್ರತಿ ವರ್ಷದಲ್ಲಿ ಎರಡು ಕಂತಿನಲ್ಲಿ ಕಟ್ಟಬಹುದಾಗಿದೆ. ಶೇಕಡಾ 1: 2 ರಷ್ಟು ಬಾಕಿದಾರ ಘಟಕಗಳಿಗೆ ಕಡಿಮೆ ಮಾಡಲಾಗುವುದು.

4) ತೆರಿಗೆ ಇಲಾಖೆಗೆ, ತೆರಿಗೆ ಬಾಕಿಯನ್ನು 6 ವರ್ಷಗಳಲ್ಲಿ, 6 ತಿಂಗಳಿಗೊಮ್ಮೆ ಪ್ರತಿ ವರ್ಷ ಸರಳ ಬಡ್ಡಿ ಶೇಕಡಾ 1: 2 ರಷ್ಟು ತುಂಬಲು ಅವಕಾಶವಿರುತ್ತದೆ.

5) ಘಟಕಗಳು ಮುಚ್ಚಿರುವ ಸಮಯದಲ್ಲಿ ಕೆ.ಪಿ.ಟಿ.ಸಿ.ಎಲ್. ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಬಡ್ಡಿಯನ್ನು ವಿಧಿಸಬಾರದು.

6) ಘಟಕಗಳು ಮುಂದೆ ತೆರಿಗೆ ಪಾವತಿ ಮಾಡಬೇಕಾದ್ದಲ್ಲಿ, ಬಡ್ಡಿ ರಹಿತ ಮೂರು ವರ್ಷಗಳ ಕಾಲ ಮುಂದೂಡಬಹುದಾಗಿದೆ.

ಮುಜರಾಯಿ ಇಲಾಖೆ ವತಿಯಿಂದ ಬಿಡುಗಡೆಯಾಗಿರುವ ಹಣ.

2344(2832) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮುಜರಾಯಿ ಇಲಾಖೆಯಿಂದ ಕಳೆದ ವರ್ಷ ಎಷ್ಟು ಅನುದಾನ (ಆರಾಧನಾ ಹೊರತುಪಡಿಸಿ) ಚಾಮರಾಜನಗರ ಜಿಲ್ಲೆಗೆ ಬಿಡುಗಡೆಯಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

2. ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಹಣ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. 2000-2001ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

1 ಕೊಳ್ಳೆಗಾಲ ತಾಲ್ಲೂಕು - 50,000.00 (ನಿರ್ಮಾಣಕ್ಕೆ)
1 ಚಾಮರಾಜನಗರ ತಾಲ್ಲೂಕು - 50,000.00 (ನಿರ್ಮಾಣಕ್ಕೆ)
1 ಗುಂಡ್ಲುಪೇಟೆ ತಾಲ್ಲೂಕು - 50,000.00 (ದುರಸ್ತಿ/ಜೀರ್ಣೋದ್ಧಾರ)

2. ರಾಜ್ಯದಲ್ಲಿ ವಿವಿಧ ಜಿಲ್ಲೆಗಳಿಗೆ 2000-2001ನೇ ಸಾಲಿಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

(ನಿರ್ಮಾಣಕ್ಕೆ) ಒಟ್ಟು ರೂ.105.00 ಲಕ್ಷ

(ದುರಸ್ತಿ / ಜೀರ್ಣೋದ್ಧಾರ) ಒಟ್ಟು ರೂ.126.00 ಲಕ್ಷ

ಕ್ರ.ಸಂ.	ಜಿಲ್ಲೆ	ನಿರ್ಮಾಣ	ದುರಸ್ತಿ / ಜೀರ್ಣೋದ್ಧಾರ
1.	ಬೆಂಗಳೂರು ನಗರ	6,25,000-000	6,00,000-00
2.	ಬೆಂಗಳೂರು ಗ್ರಾಮಾಂತರ	50,000-000	6,10,000-00
3.	ತುಮಕೂರು	4,90,000-00	5,45,000-00
4.	ಕೋಲಾರ	2,65,000-000	6,90,000-00
5.	ದಾವಣಗೆರೆ	2,40,000-000	80,000-00
6.	ಮೈಸೂರು	50,000-000	5,50,000-00
7.	ಮಂಡ್ಯ	1,75,000-00	9,50,000-00
8.	ದಕ್ಷಿಣ ಕನ್ನಡ	26,50,000-00	8,00,000-00
9.	ಕೊಡಗು	3,00,000-00	3,50,000-00
10.	ಹಾಸನ	2,00,000-00	6,75,000-00
11.	ಚಿಕ್ಕಮಗಳೂರು	90,000-00	3,70,000-00
12.	ಶಿವಮೊಗ್ಗ	5,50,000-00	2,00,000-00

1	2	3	4
13.	ಬೆಳಗಾವಿ	6,15,000-00	3,50,000-00
14.	ಧಾರವಾಡ	11,55,000-000	50,000-00
15.	ಬಿಜಾಪುರ	3,60,000-000	3,00,000-00
16.	ಉತ್ತರ ಕನ್ನಡ	1,80,000-000	2,10,000-00
17.	ಗುಲ್ಬರ್ಗಾ	5,95,000-00	22,00,000-00
18.	ಬಳ್ಳಾರಿ	1,40,000-00	1,00,000-00
19.	ರಾಯಚೂರು	--	1,60,000-00
20.	ಬೀದರ್	1,60,000-00	1,50,000-00
21.	ಚಾಮರಾಜನಗರ	90,000-000	40,000-00
22.	ಬಾಗಲಕೋಟೆ	5,80,000-000	1,00,000-00
23.	ಉಡುಪಿ	--	21,00,000-00
24.	ಗದಗ್	2,30,000-000	1,50,000-00
25.	ಹಾವೇರಿ	5,00,000-000	1,50,000-00
26.	ಚಿತ್ರದುರ್ಗ	60,000-000	60,000-00
27.	ಕೊಪ್ಪಳ	1,50,000-00	60,000-00
	ಒಟ್ಟು	ರೂ. 1,05,00,000-00	ರೂ.1,26,00,000-00

1999-2000ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಸಂದಾಯವಾದ ಹಣ.

2345(2612) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗುತ್ತಿದ್ದ ಅಬಕಾರಿ ಮಾರಾಟ ತೆರಿಗೆಯನ್ನು ವಾಣಿಜ್ಯ ಇಲಾಖೆಯಿಂದ ಬೇರ್ಪಡಿಸಿ ಅಬಕಾರಿ ಇಲಾಖೆಗೆ ಪ್ರತ್ಯೇಕ ತೆರಿಗೆ ವಸೂಲಿ ಆದೇಶ ಹೊರಡಿಸಿದ ಮೇಲೆ ನೂರಾರು ಕೋಟಿ ರೂ.ಗಳು ರಾಜ್ಯ ಬೊಕ್ಕಸಕ್ಕೆ ನಷ್ಟವಾಗಿರುವುದು ನಿಜವಲ್ಲವೇ?